ಆ ಕೆಲಸ ಪ್ರಾರಂಭವಾಗುತ್ತದೆ ಎನ್ನುವಂತಹ ಭರವಸೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ವಿಶ್ವನಾಥ್‌ರವರೆ, ನಿಮ್ಮ ಪ್ರಶ್ನೆ ಜಲಸಂಪನ್ಮೂಲ ಇಲಾಖೆಗೆ ವರ್ಗಾವಣೆ ಆಗಿದೆ. ಅವರು ಈಗ ಉತ್ತರ ಕೊಡುತ್ತಾರೆ ಉತ್ತರ ನೋಡಿಕೊಂಡು ಈಗಲೇ ಪ್ರಶ್ನೆ ಕೇಳುತ್ತೀರಾ? ಕೇಳಿ.

ಶ್ರೀ ವಿಶ್ವನಾಥ್ ಎಸ್.ಆರ್: ಮಾನ್ಯ ಅಧ್ಯಕ್ಷರೆ, 260ನೇ ಪ್ರಶ್ನೆಗೆ ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರ ಕೊಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ನನಗೆ ಉತ್ತರದ ಪ್ರತಿ ಬಂದಿಲ್ಲ

ಅಧ್ಯಕ್ಷರು: ಅದಕ್ಕಾಗಿ ನಾನು ಮುಂದೆ ತೆಗೆದುಕೊಳ್ಳುತ್ತೇನೆಂದು ಹೇಳಿದೆ. ನೀವು ಈಗಲೇ ಕೇಳುತ್ತೇನೆಂದು ಹೇಳಿದಿರಿ.

ಶ್ರೀ ಎಸ್.ಆರ್. ವಿಶ್ವನಾಥ್: ಪ್ರಸ್ತಾವನೆಯನ್ನು ಮಂಡಿಸುತ್ತೇನೆ, ಈಗಲೇ ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಅರ್ಕಾವತಿ ನದಿ ಪುನಶ್ಚೇತನದ ಬಗ್ಗೆ ನನಗೆ ಐದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು: ಮಾನ್ಯ ವಿಶ್ವನಾಥ್‌ರವರೇ ಅವರು ಉತ್ತರ ಏನು ಕೊಟ್ಟಿದ್ದಾರೆ ನೋಡಿಕೊಂಡು ಪ್ರಶ್ನೋತ್ತರ ಕಾಲದಲ್ಲಿ ಏನಾದರೂ ಪ್ರಶ್ನೆಗಳನ್ನು ಕೇಳುವುದು ಅಥವಾ ಸ್ಪಷ್ಟೀಕರಣ ಕೇಳುವಂಥದ್ದು ಆಗಬೇಕು. ವಿವರವಾಗಿ ಮಾತನಾಡುವುದಕ್ಕೆ ಪ್ರಶ್ನೋತ್ತರ ಅವಧಿಯಲ್ಲಿ ಆಗುವುದಿಲ್ಲ.

ಶ್ರೀ ಎಸ್.ಆರ್. ವಿಶ್ವಾನಾಥ್: ಐದು ನಿಮಿಷ ಅವಕಾಶ ಮಾಡಿಕೊಟ್ಟರೆ ಮುಂದಿನ ಪ್ರಶ್ನೋತ್ತರ ಸಮಯದಲ್ಲಿ ಕೇಳುತ್ತೇನೆ.

ಅಧ್ಯಕ್ಷರು: ಆಯಿತು, ನಂತರ ತೆಗೆದುಕೊಳ್ಳೋಣ.

268 ಶ್ರೀ ಸುನೀಲ್ ವಿ.ಹೆಗಡೆ

ಸಿ.ಎಂ. ಉದಾಸಿ(ಲೋಕೋಪಯೋಗಿ ಸಚಿವರು)

ಅ) ಜೋಯಿಡಾ ತಾಲ್ಲೂಕು 87% ಅರಣ್ಯ ಭೂಮಿಯನ್ನು ಹೊಂದಿದ್ದು, ಅಲ್ಲಿ ವಾಸಿಸುವ ಬುಡಕಟ್ಟು ಜನಾಂಗದವರಿಗೆ ನಗರ ರಸ್ತೆ ಸಂಪರ್ಕ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಲ್ಲಿ ವಾಸಿಸುವ ಜನರಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವ ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಹಾಗೂ ಸದರಿ ಕಾಮಗಾರಿಗೆ ಸರ್ಕಾರ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವುದೇ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು; ವಿವರಗಳನ್ನು ನೀಡುವುದು?

ಈ ಅಂಶವನ್ನು ಗಮನಿಸಿ, ಸರ್ಕಾರಿ ಆದೇಶ ಸಂಖ್ಯೆ: ಲೋಇ 463 ಸಿಆರ್ ಎಂ 2008, ದಿನಾಂಕ: 27–8–2008ರಲ್ಲಿ ಜೋಯಿಡಾ ತಾಲ್ಲೂಕಿನ 93.10 ಕಿ.ಮೀ ಗ್ರಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಜೋಯಿಡಾ ತಾಲ್ಲೂಕಿಗೆ 2008–09ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054ರಡಿಯಲ್ಲಿ ರೂ.190.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

2009–10ನೇ ಸಾಲಿನಲ್ಲಿ ಜೋಯಿಡಾ ತಾಲ್ಲೂಕಿನ ಅತೀ ಅವಶ್ಯಕವಾಗಿ ಕೈಗೊಳ್ಳಬೇಕಾದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅನುದಾನ ಲಭ್ಯತೆಯನ್ನಾಧರಿಸಿ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಸುನಿಲ್ ವಿ. ಹೆಗಡೆ: ಸನ್ಮಾನ್ಯ ಸಭಾಧ್ಯಕ್ಷರೆ, ಜೋಯಿಡಾ ತಾಲ್ಲೂಕು ಗಡಿ ಪ್ರದೇಶ ಆಗಿದ್ದು, ಅಲ್ಲಿ ಮಲೆನಾಡು ಅಭಿವೃದ್ಧಿ ಗಡಿ ಕನ್ನಡ ಪ್ರಾಧಿಕಾರ ಮತ್ತು ಲೋಕೋಪಯೋಗಿ ಇಷ್ಟೆಲ್ಲಾ ಇಲಾಖೆಗಳು ಇದ್ದರೂ ಸಹ ರಸ್ತೆ ಹಾಗೂ ಸಂಪರ್ಕ ಸೇತುವೆಗಳು ಬಹಳ ದುಸ್ಥಿತಿಯಲ್ಲಿವೆ. ಈಗಾಗಲೇ ಅಲ್ಲಿ ಗಡಿ ಕನ್ನಡ ಉತ್ಸವಕ್ಕೆ ಸನ್ಮಾನ್ಯ ಮಂತ್ರಿಗಳು ಬಂದಾಗ ಎಲ್ಲಾ ವಿಷಯಗಳನ್ನು ಅವಲೋಕಿಸಿ ಕೆಲವೊಂದು ಆಶ್ವಾಸನೆಗಳನ್ನು ಕೊಟ್ಟಿದ್ದರು. ಯಾವ ರೀತಿ ಮನೆಯ ರಕ್ಷಣೆಗೆ ಕಾಂಪೌಂಡ್ ಅವಶ್ಯಕತೆ ಇದೆಯೋ ಹಾಗೆ ರಾಜ್ಯದ ರಕ್ಷಣೆಗೆ ಎಲ್ಲಾ ಗಡಿ ಪ್ರದೇಶಗಳ ಸುಧಾರಣೆಯ ಅವಶ್ಯಕತೆ ಇರುವುದರಿಂದ ಈ ದಿಸೆಯಲ್ಲಿ ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ, 891 ಕಿ.ಮಿ. ರಸ್ತೆ ಇನ್ನೂ ಡಾಂಬರೀಕರಣ ಆಗುವಂಥದ್ದು ಬಾಕಿ ಇದ್ದು, ನಂಜುಂಡಪ್ಪ ವರದಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೊಟ್ಟಂತಹ ದುಡ್ಡನ್ನು ಈ ಸಂದರ್ಭದಲ್ಲಿ ವಾಪಸ್ ತೆಗೆದುಕೊಂಡಿದ್ದಾರೆ. ಕಳೆದ ವರ್ಷ ನಬಾರ್ಡಿನಲ್ಲಿ ಗಂಗೋಡಾ ರಸ್ತೆಯನ್ನು ಅಭಿವೃದ್ಧಿಪಡಿಸಲಿಕ್ಕೆ ಕೊಟ್ಟಂತಹ ಅನುದಾನವೂ ವಿತ್‌ಡ್ರಾ ಆಗಿದೆ. ಆ ಕಾರಣದಿಂದ ಈ ಗಂಗೋಡಾ ರಸ್ತೆ ಮತ್ತು ಕುಂಡಲ್ ಬ್ರಿಡ್ಜ್‌ಗಳು. ಡಿಜ್ಜಿಯಲ್ಲಿ 14 ಸೇತುವೆಗಳನ್ನು KRDCL ನವರು ತೆಗೆದುಕೊಂಡು ಕೇವಲ ಐದು ಸೇತುವೆಗಳನ್ನು ಮಾಡಿದ್ದಾರೆ. ಅಷ್ಟೂ ಸೇತುವೆಗಳಿಗೆ ಐದು ಸಾರಿ ಶಂಕುಸ್ಥಾಪನೆ ಆಗಿದೆ. ಕಾರಿಡಾರ್

ಸೇತುವೆ ಆಗಿಲ್ಲ. ಈ ಎಲ್ಲಾ ಕಾರಣಗಳಿಂದ ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಈ ವರ್ಷದ ಅನುದಾನದಲ್ಲಿ ಈ ಎಲ್ಲಾ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ? ಈ ಎಲ್ಲಾ ಬ್ರಿಡ್ಜ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ ಹೇಗೆ ಎಂದು ಮಾನ್ಯ ಸಚಿವರಿಂದ ನಾನು ತಿಳಿಯುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಜೋಯಿಡಾ ತಾಲ್ಲೂಕು ಅತ್ಯಂತ ಹಿಂದುಳಿದುದು ಎಂದು ಗಮನಿಸಿ 27.08.08ರಲ್ಲಿ ಜೋಯಿಡಾ ತಾಲ್ಲೂಕಿನಲ್ಲಿ 93ಕಿ.ಮಿ. ಗ್ರಾಮೀಣ ರಸ್ತೆಗಳನ್ನು ಮುಖ್ಯ ರಸ್ತೆಗಳಾಗಿ ಪರಿವರ್ತನೆ ಮಾಡಿರುವುದನ್ನು ಅವರ ಉತ್ತರದಲ್ಲಿ ನಾವು ತಿಳಿಸಿ ಆಗಿದೆ.

11–30AM

ಇದರ ಜೊತೆಗೆ ಜೋಯಿಡಾ ರಸ್ತೆಗಳ ಮಧ್ಯೆ 8 ಸೇತುವೆಗಳ ಬಗ್ಗೆ ಅವರು ಮತ್ತೊಂದು ಪ್ರಶ್ನೆಯನ್ನು ಕೇಳಿರುವುದಕ್ಕೆ ಲಿಖಿತವಾಗಿ ಉತ್ತರಗಳು ಅವರಿಗೆ ಲಭ್ಯವಾಗುತ್ತಿದೆ. ಆ ಸೇತುವೆಗಳ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುವ ಸಲುವಾಗಿ ಅತಿ ಶೀಘ್ರದಲ್ಲಿಯೇ ಕ್ರಮ ತೆಗೆದುಕೊಳ್ಳಬೇಕೆಂದು ಕೆ.ಆರ್.ಡಿ.ಸಿ.ಎಲ್.ನವರಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಇದಕ್ಕೆ ಬೇಕಾಗಿರತಕ್ಕಂಥ ಅನುದಾನವನ್ನು 2008–09 ರಲ್ಲಿ 190 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟು ಕೆಲಸವನ್ನು ಮಾಡಿಸುತ್ತಿದ್ದೇವೆ ಎನ್ನುವುದನ್ನೂ ಕೂಡ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸುನೀಲ್ ಎ. ಹೆಗಡೆ:– ಮಾನ್ಯ ಅಧ್ಯಕ್ಷರೆ, 93 ಕಿ.ಮೀ. ರಸ್ತೆಯನ್ನು ಕಳೆದ ವರ್ಷ ಅಪ್‌ಗ್ರೆಡೇಶನ್ ಮಾಡಿದ್ದಾರೆ. ಅದಕ್ಕೆ ಇದುವರೆಗೂ ಯಾವುದೇ ಅನುದಾನವೂ ಕೂಡ ಬಂದಿಲ್ಲ. ಮುಖ್ಯರಸ್ತೆಯಾದ ಜೋಯಿಡಾದಿಂದ ಕಾರವಾರದವರೆಗಿನ ಸಂಪರ್ಕ ಆಗುವ ರಸ್ತೆಯನ್ನು ಏನು ಕೇಶಿಪ್‌ನವರಿಗೆ ಕೊಟ್ಟಿದ್ದಾರೆ, ಅದನ್ನು ಕುಂಬಾರವಾಡದಿಂದ 25 ಕಿ.ಮೀ. ವರೆಗೆ ಕಾಮಗಾರಿ ಕಳೆದ ಮೂರ್‍ನಾಲ್ಕು ವರ್ಷದಿಂದ ಆಗಿಲ್ಲ. ಹಲವಾರು ಬಾರಿ ಸಾರ್ವಜನಿಕ ಪ್ರತಿಭಟನೆ ಕೂಡ ಆಗಿದೆ. ಈ ದಿಸೆಯಲ್ಲಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಈ ಬಾರಿಯಾದರೂ ಈ ವರ್ಷದ ಕೊನೆಯೊಳಗಾದರೂ ಈ ಎಲ್ಲಾ ರಸ್ತೆ ಮತ್ತು ಸೇತುವೆಗಳ ಕಾಮಗಾರಿಗಳನ್ನು ಆದ್ಯತೆ ಮೇಲೆ ಮಾಡಿಕೊಟ್ಟಲ್ಲಿ ಇತ್ತೀಚೆಗೆ ನಡೆದ ಗಡಿ ಕನ್ನಡ ಉತ್ಸವಕ್ಕೂ ಕೂಡ ಅರ್ಥ ಬಂದಂತಾಗುತ್ತದೆ ಮತ್ತು ಒಳ್ಳೆಯ ಉದ್ದೇಶ ಸಫಲವಾಗಬಹುದು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರ ಗಮನಕ್ಕೆ ತಂದಿದ್ದೇನೆ. ಸೇತುವೆಗಳ ನಿರ್ಮಾಣ ಮಾಡಬೇಕಾದ ಕೆಲಸವನ್ನು ಪ್ರಗತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. ರಸ್ತೆಗಳ ಪೈಕಿ ಅನುದಾನವನ್ನು ಕೊಟ್ಟಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ, ಆ ರಸ್ತೆಗಳಿಗೆ ಹಣವನ್ನು ಕೊಡಲು ಅವಕಾಶವನ್ನು ಮಾಡಿಕೊಂಡು ಆ ರಸ್ತೆಗಳನ್ನು ಸುಧಾರಣೆ ಮಾಡುವಂಥ ಕೆಲಸವನ್ನು ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ಈ ಪ್ರಶ್ನೆ ಜೋಯಿಡಾ ತಾಲ್ಲೂಕಿಗೆ ಸಂಬಂಧಪಟ್ಟಂತೆ ಇರುವ ಪ್ರಶ್ನೆಯಾಗಿರುವುದರಿಂದ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಸಹಕರಿಸಿ ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಮಾನ್ಯ ಬಚ್ಚೇಗೌಡರದ್ದು 27 ಕ್ಕೆ ನಿಗದಿಯಾಗಿದೆ. ಈಗ ಜಮೀರ್ ಅಹಮದ್‌ರವರ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

157 ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್.(ಚಾಮರಾಜಪೇಟೆ)

ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

ಅ. ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿಯ ಅವ್ಯವಸ್ಥೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ, ಆದಾಗ್ಯೂ ದುರಸ್ತಿಕಾಮಗಾರಿಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಆ.) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಬೆಂಗಳೂರು ಜಲಮಂಡಳಿಯಿಂದ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ರೂ.38.71 ಲಕ್ಷ ಮೊತ್ತದಲ್ಲಿ ನೀರು ಸರಬರಾಜು ಕೊಳವೆ ಕಾಮಗಾರಿ ಹಾಗೂ ರೂ.104.95 ಲಕ್ಷ ಮೊತ್ತದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳನ್ನು ಹೊರತುಪಡಿಸಿ ತುರ್ತು ಸಮಯದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಾಹೆಯಾನ ಸಣ್ಣ ಕಾಮಗಾರಿಗಳನ್ನು ಸಹ ಆಗಿಂದಾಗ್ಗೆ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.

ಇ.) ಈ ಅವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೆ;